**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 118/2017**

ಸಿ.ಡಬ್ಲ್ಯೂ -7

ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ರಾಜೇಂದ್ರ |
| ತಂದೆಃಗಂಡ | ಃ | ಶರಣಪ್ಪ |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಅಬಕಾರಿ ಪೇದೆ, ವಲಯ-1 ಕಲಬುರಗಿ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ10.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು 2011 ರಿಂದ 2013 ಆಳಂದ ವಲಯದಲ್ಲಿ ಕಾರ್ಯ ನಿರ್ವಹಿಸಿದ್ದೇನೆ.

ದಿ.21.05.2012 ರಂದು ನಾನು ಹಾಗೂ ನನ್ನ ಸಹೋದ್ಯೋಗಿ ಕಚೇರಿಯಲ್ಲಿದ್ದಾಗ ಚಾಸಾ-3 ರವರು ನಮ್ಮನ್ನು ಕರೆದು ಅಳಂದ ತಾಲ್ಲೂಕಿನ ಪಡಸಾವಳಗಿ ಗ್ರಾಮದ ಅಂಬಾಬಾಯಿ ಗುಡಿಯ ಹತ್ತಿರ ಆರೋಪಿ ಅಕ್ರಮ ಕಳ್ಳಬಟ್ಟಿ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಬಾತ್ಮಿ ಬಂದಿದ್ದು, ದಾಳಿಗೆ ಸಿದ್ದರಾಗಿ ಎಂದು ತಿಳಿಸಿದ್ದು, ನಮ್ಮ ಮೇಲಾಧಿಕಾರಿ ಹಾಗೂ ಚಾಸಾ-1, 2 ರವರೊಂದಿಟೆ ಕಚೇರಿ ವಾಹನ ಸಂಖ್ಯೆ ಕೆಎ- 32/ಜಿ-479 ರಲ್ಲಿ ಪಡಸಾವಗಿ ಗ್ರಾಮಕ್ಕೆ ತಲುಪಿದೇವು. ಅಲ್ಲಿ ನಿಂತು ಗಸ್ತು ಮಾಡುವಾಗ ಅಂಬಾಬ,ವಾನಿ ಗುಡಿಯ ಹತ್ತಿರ ಕೆಲವು ಜನರು ನೆರದಿದ್ದರು. ನಮ್ಮನ್ನು ನೋಡಿ ಅಲ್ಲಿಂದ ಓಡಿ ಹೋದರು. ನಾನು ಹಾಗೂ ನಮ್ಮ ಮೇಲಾಧಿಕಾರಿ ಸ್ಥಳಕ್ಕೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ಎರಡು ಕ್ಯಾನಗಳನ್ನು ಬಚ್ಚಿಡಲು ಪ್ರಯತ್ನಿಸುತ್ತಿದ್ದನು. ಆಗ ನಾನು ಮತ್ತು ನಮ್ಮ ಸಹೋದ್ಯೋಗಿ ಲಕ್ಷ್ಮಣರವರು ಸದರಿ ವ್ಯಕ್ತಿಯನ್ನು ಹಿಡಿದು ನಮ್ಮ ಮೇಲಾಧಿಕಾರಿ ಕ್ಯಾನಿನಲ್ಲಿ ಎನು ಇದೆ ಎಂದು ವಿಚಾರಿಸಿದಾಗ ಸದರಿ ವ್ಯಕ್ತಿ ಉತ್ತರಿಸಿರುವುದಿಲ. ನಮ್ಮ ಮೇಲಾಧಿಕಾರಿ ಶೋಧನಾ ಪತ್ರ ತಯಾರಿಸಿ ಕ್ಯಾನ ಪರಿಶೀಲನೆ ಮಾಡಿದಾಗ ಅದರೊಳಗೆ ನೀರಿನಂತೆ ಇರುವ ದ್ರವ ಕಂಡು ಬಂದಿರುತ್ತದೆ. ನಮ್ಮ ಮೇಲಾಧಿಕಾರಿ ಅದರ ವಾಸನೆ ನೋಡಿದಾಗ ಕೆಟ್ಟ ವಾಸನೆ ಬರುತ್ತಿದ್ದು, ಆಗ ನಮ್ಮ ಮೇಲಾಧಿಕಾರಿ ಕಳ್ಳಬಟ್ಟಿ ಸರಾಯಿ ಎಂದು ಖಚಿತಪಡಿಸಿಕೊಂಡು ಎರಡು ಕ್ಯಾನಗಳನ್ನು ತಮ್ಮ ತಾಬೆಗೆ ತೆಗೆದುಕೊಂಡರು. ಎರಡು ಕ್ಯಾನಗಳಲ್ಲಿ ಅಂದಾಜು 10 ಲೀಟರ ಕಳ್ಳಬಟ್ಟಿ ಸರಾಯಿ ಇತ್ತು. ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ಅರೋಪಿ ಎಂದು ಕಂಡು ಬಂದಿರುತ್ತದೆ. ಸದರಿ ವ್ಯಕ್ತಿ ನ್ಯಾಯಾಲಯದಲ್ಲಿದ್ದು ಸಾಕ್ಷಿ ಅವರನ್ನು ನೋಡಿ ಗುರತಿಸಿರುತ್ತಾರೆ. ಸದರಿ ಕ್ಯಾನಗಳಿಂದ 180 ಎಂಎಲನ 2 ಬಾಟಲಿಗಳಲ್ಲಿ ಮಾದರಿಗಾಗಿ ತೆಗೆದು ಸ್ಥಳದಲ್ಲಿಯೇ ಮಾದರಿ ಪತ್ರ ತಯಾರಿಸಿ ಪಂಚರು ಹಾಗೂ ಮೇಲಾಧಿಕಾರಿಗಳು ಸಹಿ ಮಾಡಿ ಮಾದರಿ ಚೀಟಿಗಳನ್ನು ಎರಡು ಬಾಟಲಿಗಳ ಮೇಲೆ ಅಂಟಿಸಲಾಯಿತು. ಎರಡು ಬಾಟಲಿಗಳನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿ ದಾರದಿಂದ ಸುತ್ತಿ ಕಚೇರಿ ಮುದ್ರೆ ಸಂಖ್ಯೆ 415 ಎಂದು ಮುದ್ರಿಸಿ ಆರೋಪಿ ಹಾಗೂ ಪಂಚನಾಮೆಯನ್ನು ಕಚೇರಿಗೆ ತಂದು ಸಲ್ಲಿಸಿ ಮುಂದಿನ ಕ್ರಮ ಕೈಗೊಂಡಿರುತ್ತಾರೆ. ಸಾಕ್ಷಿ ಮು.ಮಾ.1 ನ್ನು ಗುರುತಿಸಿರುತ್ತಾರೆ.

**ಪಾ. ಸವಾಲುಃ- ಆರೋಪಿ ಪರ ಬಿ.ಐ.ಎಸ್. ವಕೀಲರಿಂದಃ**

ದಿ.21.05.2012 ರಂದು ಬಾತ್ಮಿ ವಿಷಯ ನಮಗೆ ತಿಳಿಸಿದಾಗ ರಾತ್ರಿ ಸುಮಾರು 7.30 ಆಗಿತ್ತು. ಸಾಮಾನ್ಯವಾಗಿ ನಮ್ಮ ಕರ್ತವ್ಯದ ಅವಧಿ ಬೆಳಗ್ಗೆ 10.00 ರಿಂದ ಸಂಜೆ 6.00 ರಿಂದ 7.00 ಗಂಟೆಯವರೆಗೆ ಇರುತ್ತದೆ ಸಾಕ್ಷಿ ಮುಂದುವರೆದು ಆದರೆ ತುರ್ತು ಸಂದರ್ಭದಲ್ಲಿ ಕಚೇರಿಯಲ್ಲಿ ಅಧಿಕ ಅವಧಿಯಲ್ಲಿ ಕಾರ್ಯ ನಿರ್ವಹಿಸಬೇಕು ಎಂದು

ಹೇಳುತ್ತಾರೆ. ನಮ್ಮ ಮೇಲಾಧಿಕಾರಿ ಬಾತ್ಮಿ ಜವಿಷಯ ತಿಳಿಸಿದ ನಂತರವೇ ನನಗೆ ಗೊತ್ತಾಗಿರುತ್ತದೆ. ನಾವು ಕಚೇರಿಯಿಂದ ಸಂಜೆ 7.40 ಗಂಟೆಗೆ ಹೊರಟು ಪಡಸಾವಳಗಿ ಗ್ರಾಮಕ್ಕೆ ಅಂದಾಜು 8.15 ಕ್ಕೆ ತಲುಪಿರುತ್ತೇವೆ. ನಾವು ಗುಡಿಯಿಂದ ಅಂದಾಜು 100-120 ಅಡಿ ಅಂತರದಲ್ಲಿ ಗಾಡಿ ನಿಲ್ಲಿಸಿದೇವು. ಸ್ಥಳದಿಂದ ಓಡಿ ಹೋದವರ ಮೇಲೆ ನಮಗೆ ಸಂಶಯ ಬರಲಿಲ್ಲ ಅಲ್ಲಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯ ಬಗ್ಗೆ ಸಂಶಯ ಬಂದಿರುತ್ತದೆ. ಸಾಮಾನ್ಯವಾಗಿ ಅಂಬಾಬಾಯಿ ಗುಡಿಗೆ ಪೂಜೆಗಾಗಿ ಹಾಗೂ ಭಜನೆಗಾಗಿ ಬಂದಿರುತ್ತಾರೆ ಎಂದರೆ ಸರಿ. ಗುಡಿಯ ಮುಂದೆ ಸಾಮಾನ್ಯವಾಗಿ ಭಿಕ್ಷುಕರು ಕೂತಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಅಂಗವಿಕಲರು ಗುಡಿಯ ಮುಂದೆ ಕೂರುತ್ತಾರೆ ಎಂದರೆ ಸರಿ. ಸಂಶಯಾಸ್ಪದ ವ್ಯಕ್ತಿ ಓಡಿ ಹೋಗಲು ಪ್ರಯತ್ನ ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ಅವನು ಅಂಗವಿಕಲ ಇದ್ದ ಕಾರಣ ಓಡಿ ಹೋಗಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ, ಯಾವುದೇ ಕಳ್ಳಬಟ್ಟಿ ಮಾರಿರುವುದಿಲ್ಲ ನಮ್ಮ ಮೇಲಾಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುಡಿಯ ಮುಖ್ಯ ದ್ವಾರ ದಕ್ಷಿಣ ದಿಕ್ಕಿಗೆ ಮುಖವಾಗಿ ಇತ್ತು.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ.ಸಿ ಆಳಂದ